[C.R.P.67]

Form No.4 (civil)
Deposition Sheets
(R.P.No.57)

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ,**
**ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .**

ಸಿ.ಸಿ. ನಂ. 2669/2024

ಪ್ರಾ.ಸಾ.2 ಚಾ.ಸಾ.4

| | | |
|---|---|---|
| ಸಾಕ್ಷಿದಾರರ ಹೆಸರು | : | ಕರಿಬಸಪ್ಪ |
| ತಂದೆಯ ಹೆಸರು | : | ದೇವೆಂದ್ರಪ್ಪ |
| ವಯಸ್ಸು | : | 52 ವರ್ಷಗಳು |
| ಉದ್ಯೋಗ | : | ವ್ಯವಸಾಯ |
| ವಾಸ | : | ಕೆಂಪನಹಳ್ಳಿ ಗ್ರಾಮ, ಚನ್ನಗಿರಿ ತಾಲ್ಲೂಕು. |

ಪ್ರಮಾಣ ವಚನ ಬೋಧಿಸಿದ ದಿನಾಂಕಃ 11-06-2026

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1) ಚಾ.ಸಾ.2 ಮತ್ತು 3 ನನ್ನ ಸಂಬಂಧಿಗಳು, ಚಾಸಾ-1 ನನ್ನ ಹೆಂಡತಿ, 1ನೇ ಆರೋಪಿ ನನ್ನ ತಮ್ಮ . 2ನೇ ಆರೋಪಿ ನನ್ನ ತಮ್ಮನ ಹೆಂಡತಿ .

2) ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ನನಗೆ ಹಲ್ಲೆ ಮಾಡಿಲ್ಲ ಮತ್ತು ಯಾವುದೇ ಕೊಲೆ ಬೆದರಿಕೆ ಹಾಕಿರುವುದಿಲ್ಲ. ಚಾಸಾ-1 ರವರು ದೂರು ನೀಡಿರುವ ವಿಚಾರ ನನಗೆ ಗೊತ್ತಿಲ್ಲ. ನಾನು ಯಾವುದೇ ಚಿಕಿತ್ಸೆಯನ್ನು ಪಡೆದುಕೊಂಡಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ನ್ಯಾಯಾಲಯದ ಮುಂದಿರುವ ತೆಂಗಿನ ಮಟ್ಟೆಯನ್ನು ನಾನು ಈ ಹಿಂದೆ ನೋಡಿಲ್ಲ ಹಾಗೂ ಪೊಲೀಸರ ಮುಂದೆ ನಾನು ಹಾಜರುಪಡಿಸಿಲ್ಲ. ನಿಪಿ.1 ಮತ್ತು 2 ರಲ್ಲಿರುವ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯಾಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಕೇಳಿಕೊಂಡಿರುತ್ತಾರೆ. ಆಲಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕರಿಂದಃ

1) ದಿನಾಂಕಃ 17-03-2024 ರಂದು ಸಂಜೆ 5-00 ಗಂಟೆ ಸಮಯದಲ್ಲಿ ಚಾಸಾ-1 ರವರು ಮನೆಯ ಮುಂದಿನ ಜಾಗದಲ್ಲಿ ನೀರು ಹಾಕಿದ್ದ ವಿಚಾರದಲ್ಲಿ 1ನೇ ಆರೋಪಿಯು ನನ್ನನ್ನು ಕುರಿತು ಏ ಸೂಳೆಮಕ್ಕಳ ಯಾವನೋ ನೀರು ಹಾಕಿದ್ದು

ಎಂದು ಬೈಯ್ಯುತ್ತಿದ್ದಾಗ ಚಾಸಾ-1 ರವರು ಹೋಗಿ ಕೇಳಿದ್ದಕ್ಕೆ 1ನೇ ಆರೋಪಿಯು ಚಾಸಾ-1 ರವರಿಗೆ ಬೋಸುಡಿ ಮುಂಡೆ ಎಂದು ವೈದರು ಎಂದರೆ ಸರಿಯಲ್ಲ. 1ನೇ ಆರೋಪಿಯು ಜಗಳ ಮಾಡುತ್ತಿದ್ದಾಗ ಜಗಳ ಬಿಡಿಸಲು ಬಂದ ನನಗೆ 1ನೇ ಆರೋಪಿಯು ತೆಂಗಿನ ಮಟ್ಟೆಯಿಂದ ಎಡಗೈ ಮತ್ತು ಬೆನ್ನಿಗೆ ಹೊಡೆದು ಹಾಗೂ ಚಾಸಾ-1 ರವರಿಗೆ ಅದೇ ತೆಂಗಿನ ಮಟ್ಟೆಯಿಂದ ತಲೆಗೆ ಹೊಡೆದು ನೊವುಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿತರು ನನ್ನನ್ನು ಮತ್ತು ಚಾಸಾ-1 ರವರನ್ನು ಕುರಿತು ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ರವರು ಈ ವಿಚಾರವಾಗಿ ದಿನಾಂಕಃ 17-03-2024 ರಂದು ಪೊಲೀಸ್ ಠಾಣೆಗೆ ಹೋಗಿ ನಿಪಿ.1ರಂತೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ದೂರು ನೀಡಿದ ಮಾರನೇ ದಿನ ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಪೊಲೀಸ್ ನವರು ಬೆಳಿಗ್ಗೆ 11-45 ರಿಂದ 12-45 ಗಂಟೆಯವರೆಗೆ ಚಾ.ಸಾ. 2 ಮತ್ತು ಚಾ.ಸಾ.3 ರವರ ಸಮಕ್ಷಮ ನಿಪಿ.2 ರಂತೆ ಮಹಜರ್ ಕ್ರಮ ಜರುಗಿಸಿ, ಚಾಸಾ-1 ರವರು ಹಾಜರುಪಡಿಸಿದ ಮೇರೆಗೆ ತೆಂಗಿನ ಮಟ್ಟೆಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಈ ವಿಚಾರವಾಗಿ ದಿನಾಂಕಃ 18-03-2024 ರಂದು ಪೊಲೀಸ್ ನವರ ಮುಂದೆ "ನಾನು ............ನೀಡಿರುತ್ತೇನೆ " ಎಂಬ ಮುಂದುವರೆದ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ತಿರಸ್ಕರಿಸಿದ ಹೇಳಿಕೆಯ ಭಾಗವನ್ನು ನಿಪಿ-5 ಎಂದು ಗುರುತಿಸಲಾಯಿತು.

2. ನಾವು ಮತ್ತು ಆರೋಪಿತರು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ವಿರುದ್ಧ ದಾಖಲಿಸಿರುವ ಪ್ರಕರಣದಲ್ಲಿ ರಾಜಿಯಾಗಿರುವುದರಿಂದ, ನಾವು ಈ ಪ್ರಕರಣದಲ್ಲಿ ರಾಜಿಯಾಗುತ್ತಿದ್ದೇವೆ ಎಂದರೆ ಸರಿಯಲ್ಲ. ಆ ಕಾರಣದಿಂದ ನಾನು ನಿಪಿ.5 ರಂತೆ ಪೊಲೀಸರ ಮುಂದೆ ಮರು ಹೇಳಿಕೆ ನೀಡಿದ್ದರೂ ಹಾಗೂ ನಿಪಿ.1 ಮತ್ತು ನಿಪಿ.2 ರವರ ವಿಚಾರ ಗೊತ್ತಿದ್ದರೂ ಸಹಾ ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರುಃ ಇಲ್ಲ ಎಂದು ನುಡಿಯುತ್ತಾರೆ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಗಾರ್ತಿಯ ಮೂಲಕ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**Sd/-**

**02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**